(ಇಂದು ದಿನಾಂಕಃ **09-01-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

## ಮುಂದುವರೆದ ಪಾಟೀ ಸವಾಲು ಶ್ರೀ ವಿ ಟಿ ಕೆ ವಕೀಲರಿಂದಃ

ದಾವಾ 3 ಮತ್ತು 4 ಸಿ ಶೆಡ್ಯೂಲ ಸ್ವತ್ತುಗಳು ನನ್ನ ಅಜ್ಜನ ಅಮೃತರಾವ್ ಗಳಗಿ ಹೆಸರಿನಲ್ಲಿದ್ದವು ಎಂದರೆ ಸರಿ. ಸದರಿ ಮ್ಯುಟೇಶನ ನ್ನು ಸಾಕ್ಷಿದಾರರು ಒಪ್ಪಿದು **ನಿ ಡಿ 1** ಎಂದು ಗುರುತಿಸಲಾಯಿತು. ಅಮೃತರಾವ್ ಗಳಗಿ ರವರು ಪಾರ್ಶ್ವವಾಯುವಿನಿಂದ ಬಳಲುತ್ತಿದ್ದರು ಎಂದರೆ ಸರಿ. ಅಮೃತರಾವ್ ಗಳಗಿಯವರು ಆ ಕಾರಣಕ್ಕೆ ತಮ್ಮ ಮೂವರು ಗಂಡು ಮಕ್ಕಳಿಗೆ ಡ ನಂಃ 2053 ಎ ಪ್ರಕಾರ ಹಕ್ಕು ಬಿಟ್ಟು ಕೊಟ್ಟರು ಎಂದರೆ ಗೊತ್ತಿಲ್ಲ . ಆ ಪ್ರಕಾರ ಅವರ ಮೂವರು ಮಕ್ಕಳ ಹೆಸರು ದಾವಾ 3 ಮತ್ತು 4 ಸಿ ಶೆಡ್ಯೂಲ ಸ್ವತ್ತುಗಳ ಉತಾರುಗಳಲ್ಲಿ ದಾಖಲಾದವು ಎಂದರೆ ಗೊತ್ತಿಲ್ಲ ಆದರೆ ಉತಾರುಗಳಲ್ಲಿ ಅವರ ಹೆಸರುಗಳು ಇವೆ. ನನ್ನ ಅಜ್ಜ ಆ ರೀತಿ ಮಾಡಿಕೊಟ್ಟಿರುವುದಿಲ್ಲ . ನಾನು ಪ್ರತಿವಾದಿಗಳ ಪ್ರತಿವಾದ ಪತ್ರಗಳನ್ನು ಓದಿಗೊಂಡಿದ್ದೇನೆ. ನನ್ನ ಅಜ್ಜ ಆ ರೀತಿ ಹಕ್ಕು ಬಿಟ್ಟ ಪತ್ರ ನಮ್ಮ ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಗೊತ್ತಿಲ್ಲ. ವಾದ ಪತ್ರದಲ್ಲಿ ಬರೆಯಲು ನಾವೇ ಮಾಹಿತಿ ಕೊಟ್ಟಿದ್ದೇವು.

2. ನನ್ನ ಅಜ್ಜನ ಮೂರು ಗಂಡು ಮಕ್ಕಳು 1998 ರಲ್ಲಿ ಪಾಲು ವಿಭಾಗ ಮಾಡಿಕೊಂಡರು ಅದರ ಡ ನಂಃ 4555 ಎ ಎಂದರೆ ಸರಿಯಲ್ಲ. ಸದರಿ ಡ ನಂಬರನ್ನು ನಾವೇನು ಎಲ್ಲೂ ಪ್ರಶ್ನಿಸಿಲ್ಲ ಎಂದರೆ ಸರಿ . ಅದೇ ರೀತಿ ಡ ನಂಃ 2053 ಎ ನ್ನು ನಾವೇನು ಎಲ್ಲೂ ಪ್ರಶ್ನಿಸಿಲ್ಲ ಎಂದರೆ ಸರಿ . ಡ ನಂಃ 4555 ಎ ಮತ್ತು 2053 ಎ ಸುಮಾರು 25 ವರ್ಷಗಳ ಹಿಂದೆಯೇ ದಾಖಲಾಗಿವೆ ಎಂದರೆ ಸರಿಯಲ್ಲ. ಸರ್ವೇ ನಂಃ 1552/2 ಮೂಲ ಸರ್ವೇ ನಂಃ 1552 ಎಂದರೆ ಗೊತ್ತಿಲ್ಲ. ಸರ್ವೇ ನಂಃ 1552 ರ ಪಶ್ಚಿಮ 6 ಎಕರೆ 16 ಗುಂಟೆ ಜಮೀನನ್ನು ಕೃಷಾ ಅಮ್ರುರಾವ್ ಗಳಗಿ ಅವರ ಪಾಲಿಗೆ ಬಂತು ಎಂದರೆ ಸರಿಯಲ್ಲ . ಸರ್ವೇ ನಂಃ 1552 ರ ಪೂರ್ವ 3 ಎಕರೆ 23 ಗುಂಟೆ ಜಮೀನನ್ನು ಲಕ್ಷ್ಮಣ ಅಮ್ರುರಾವ್ ಗಳಗಿ ಅವರ ಪಾಲಿಗೆ ಬಂತು ಎಂದರೆ ಸರಿಯಲ್ಲ.

3. ಸರ್ವೇ ನಂಃ 1553/1 ರ ಮೂಲ ಸರ್ವೇ ನಂಃ 1553 ಎಂದರೆ ಗೊತ್ತಿಲ್ಲ. ಸರ್ವೇ ನಂಃ 1553 ರ ಪೂರ್ವ 6 ಎಕರೆ 15 ಗುಂಟೆ ಜಮೀನನ್ನು ರಮೇಶ ಅಮ್ರುರಾವ್ ಗಳಗಿ ಅವರ ಪಾಲಿಗೆ ಬಂತು ಎಂದರೆ ಗೊತ್ತಿಲ್ಲ . ನಾನೇನು ಅದಕ್ಕೆ ಸಂಬಂಧಪಟ್ಟ ಮ್ಯುಟೇಶನಗಳನ್ನು ನೋಡಿರುವುದಿಲ್ಲ . ದಾವಾ ಜಮೀನುಗಳ ಉತಾರುಗಳನ್ನು ವಕೀಲರ ಮೂಲಕ ತೆಗೆಸಿದ್ದೇವು. ಆ ದಾಖಲೆಗಳನ್ನು ಓದಿಕೊಂಡಿದ್ದೇನೆ ಆದರೆ ಹೆಚ್ಚು ದಾಖಲೆಗಳು ಇರುವುದರಿಂದ ನನಗೆ ನೆನಪಿಲ್ಲ. ಡ ನಂಃ 4555 ಎ ದಾಖಲೆಯನ್ನು ನೋಡಿದ್ದೇನು. ಅದನ್ನು

ಓದಿಕೊಂಡಿದ್ದೇನು. ವಾಟ್ನಿ ಪ್ರಕಾರ ಸರ್ವೇ ನಂಃ 1552/2 ರ ಮತ್ತು 1553/1 ರ ಪಹಣಿಗಳಲ್ಲಿ ಲಕ್ಷ್ಮಣ ಅಮೃತಾರಾವ್ ಗಳಗಿಯವರ ಹೆಸರುಗಳು ದಾಖಲಾದವು ಎಂದರೆ ಗೊತ್ತಿಲ್ಲ. ನಿ ಪಿ 10 ಮತ್ತು 11 ಆರ್ ಟಿ ಸಿ ಗಳನ್ನು ನಾವೇ ಹಾಜರು ಮಾಡಿದ್ದೇವೆ ಎಂದರೆ ಗೊತ್ತಿಲ್ಲ. ಸರ್ವೇ ನಂಃ1553/1 2 ಗುಂಟೆ 10 ಅಣೆ ಸರ್ಕಾರಕ್ಕೆ ಹೋಗಿದೆ ಎಂದರೆ ಸರಿಯಲ್ಲ. ಸರ್ಕಾರಕ್ಕೆ ಹೋದ ಜಮೀನನ್ನು ಸೇರಿಸಿ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ . ದಾವಾ ಸಿ ಶೆಡ್ಯೂಲ ನ 3 ಮತ್ತು 4 ನೇ ಸ್ವತ್ತುಗಳಲ್ಲಿ ನಮಗಾಗಲೀ ನಮ್ಮ ತಾಯಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

3. ರಮೇಶ ಗಳಗಿಯವರು ಕೆ ವಿ ಜಿ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ಸುಮಾರು 44,000/- ರೂ.ಗಳು ಸಂಬಳ ಕೈಗೆ ಸಿಗುತ್ತಿತ್ತು ಎಂದರೆ ಗೊತ್ತಿಲ್ಲ. ದಾವಾ ಸಿ ಶೆಡ್ಯೂಲನ 2 ನೇ ಸ್ವತ್ತುಗಳನ್ನು ಕೃಷ್ಣಾಜಿ ರವರು ಖರೀದಿ ಹಿಡಿದಿದ್ದಾರೆ ಎಂದರೆ ಸರಿಯಲ್ಲ. ಉತಾರಿನಲ್ಲಿ ಕೃಷ್ಣಾಜಿ ಅವರ ಹೆಸರು ದಾಖಲಾಗಿದೆ ಎಂದರೆ ಸರಿ . ಅವರ ಹೆಸರು ಯಾವ ಆಧಾರದ ಮೇಲೆ ದಾಖಲಾಯಿತು ಗೊತ್ತಿಲ್ಲ. ಅವರ ಹೆಸರು ಖರೀದಿ ಕಾಗದದ ಮೇಲೆ ದಾಖಲಾಯಿತು ಎಂದರೆ ಸರಿಯಲ್ಲ. ದಾವಾ ಸಿ ಶೆಡ್ಯೂಲನ 2 ನೇ ಸ್ವತ್ತು ನನ್ನ ಅಜ್ಜನಿಗೆ ಯಾವ ರೀತಿ ಬಂತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಂತಹ ಯಾವುದೇ ದಾಖಲೆಯನ್ನು ನಾವು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ . ವಾದ ಪತ್ರದಲ್ಲೂ ಈ ಬಗ್ಗೆ ಏನು ಬರೆದಿಲ್ಲ ಎಂದರೆ ಸರಿಯಲ್ಲ.

4. ದಾವಾ ಸಿ ಶೆಡ್ಯೂಲನ 1 ನೇ ಸ್ವತ್ತು ಮೇಟಿಯವರ ಜಮೀನು ಎಂದರೆ ಗೊತ್ತಿಲ್ಲ. ಅದನ್ನು ರಮೇಶ ಗಳಗಿಯವರು ಸ್ವಯಾಜಿತವಾಗಿ ಅದನ್ನು 2015 ರಲ್ಲಿ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ರಮೇಶ ಗಳಗಿಯವರು ಕೆ ವಿ ಜಿ ಬ್ಯಾಂಕ್ ನಲ್ಲಿ ಕೆಲಸ ಮಾಡಿಕೊಂಡು ಬಂದ ಸಂಬಳದಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸಿ ಶೆಡ್ಯೂಲನ 1 ಮತ್ತು 2 ನೇ ಸ್ವತ್ತುಗಳು ಕೃಷ್ಣಾ ಮತ್ತು ರಮೇಶ ಅವರಿಗೆ ಸೇರಿದ್ದು ಎಂದರೆ ಸರಿಯಲ್ಲ . ದಾವಾ ಶೆಡ್ಯೂಲನ 1 ಮತ್ತು 2 ನೇ ಸ್ವತ್ತುಗಳು ಯಾರಿಗೆ ಸೇರಿದ ಸ್ವತ್ತುಗಳು ಎಂದು ವಾದ ಪತ್ರದಲ್ಲಿ ಸೇರಿಸಿದ್ದೇವೆ. ದಾವಾ ಶೆಡ್ಯೂಲನ 1 ಮತ್ತು 2 ನೇ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸಂಬಂಧವೇ ಇಲ್ಲದ ಸ್ವತ್ತುಗಳು ಎಂದರೆ ಸರಿಯಲ್ಲ. ರಮೇಶ ಗಳಗಿಯವರು ತೀರಿ ಹೋಗಿದ್ದು ಅವರ ಹೆಂಡತಿ ಮತ್ತು ಮಕ್ಕಳ ಹೆಸರು ದಾವಾ ಶೆಡ್ಯೂಲನ 1 ನೇ ಸ್ವತ್ತಿನ ಉತಾರಿನಲ್ಲಿ ದಾಖಲಾಗಿದೆ ಎಂದರೆ ಗೊತ್ತಿಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಬಿ ಶೆಡ್ಯೂಲನ 2 ನೇ ಸ್ವತ್ತು ರಮೇಶ ರವರ ಹೆಸರಿನಲ್ಲಿತ್ತು ಎಂದರೆ ಸರಿ.

ಸದರಿ ಆಸ್ತಿಯನ್ನು ರಮೇಶ ರವರು 01.11.1991 ರಲ್ಲಿ ಸ್ವಯಾಜಿತವಾಗಿ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಪ್ಲಾಟ ನಲ್ಲಿ ರಮೇಶ ಗಳಗಿಯವರು ಸ್ವಯಾಜಿತವಾಗಿ ಮನೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಮನೆಕಟ್ಟಲು ರಮೇಶ ರವರು ಕೆ ವಿ ಜಿ ಬ್ಯಾಂಕ್ ನಲ್ಲಿ ಸಾಲವನ್ನು ಪಡೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ . ಆದಾಯ ತೆರಿಗೆಯಲ್ಲೂ ಆ ಬಗ್ಗೆ ನಮೂದು ಇದೆ ಎಂದರೆ ಗೊತ್ತಿಲ್ಲ. ಎಚ್ ಡಿ ಎಂ ಸಿ ಯ ಆಸ್ತಿ ರಿಜಿಸ್ಟರನಲ್ಲಿ ರಮೇಶ ರವರ ಹೆಸರು ದಾಖಲಾಗಿದೆ ಎಂದರೆ ಗೊತ್ತಿಲ್ಲ. ನಿ ಪಿ 4 ನಾನು ಹಾಜರು ಮಾಡಿಲ್ಲ. ನಿ ಪಿ 4 ಆಸ್ತಿ ರಿಜಿಸ್ಟರ ಉತಾರು ಎಂದರೆ ಗೊತ್ತಿಲ್ಲ. ನಾನೇ ಹಾಜರು ಮಾಡಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳಲ್ಲಿ ನಮಗಾಗಲೀ ನಮ್ಮ ತಾಯಿಗಾಗಲೀ ಹಕ್ಕು ಸಂಬಂಧಗಳು ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**